# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक-संस्कृत-विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ದಿನಾಂಕ: 07.07.2015

ಸಂಖ್ಯೆ: ಕಸಂವಿ/ಪ್ರ.ಪ/2015-16/829-20

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ ಹದಿನೈದನೆಯ ಸಭೆಯು ಜೂನ್ 30, 2015ರ ಮಂಗಳವಾರ ಬೆಳಿಗ್ಗೆ 10.30** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Shivana 7/7/15

**ಕುಲಸಚಿವರು (ಪ್ರ)**

ಇವರಿಗೆ,

1. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001.
2. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು – 560001.
3. **ಸರ್ಕಾರದ ಕಾರ್ಯದರ್ಶಿಗಳು**, ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಬಹುಮಹಡಿ ಕಟ್ಟಡ, ಬೆಂಗಳೂರು-560001.
4. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು-570001.
5. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002.
6. **ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ**, ಅಧ್ಯಕ್ಷರು, ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠ, ಎನ್.ಎಚ್.-4, ದಾವಣಗೆರೆ ರಸ್ತೆ, ಎಂ.ಕೆ. ಹಟ್ಟಿ ಅಂಚೆ, ಚಿತ್ರದುರ್ಗ ಜಿಲ್ಲೆ
7. **ಶ್ರೀ ಯೋಗೇಶ ಬಾಬು**, ಬಸವೇಶ್ವರ ನಗರ, ಬಿ.ಜಿ. ಕೆರೆ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ
8. **ಶ್ರೀ ಬಿ.ಎನ್. ಹೊಸೂರ**, ಒಕ್ಕಲಿಗ ಓಣಿ, ಸವದತ್ತಿ, ಬೆಳಗಾವಿ ಜಿಲ್ಲೆ
9. **ಡಾ. ಎಂ.ಎ. ಶೃತಿಕೀರ್ತಿ**, ಕೋಂ. ರುದ್ರೇಗೌಡ ಬಿ., ಮತ್ತೂರು ಗ್ರಾಮ, ಶಿವಮೊಗ್ಗ ತಾಲೂಕು ಮತ್ತು ಜಿಲ್ಲೆ
10. **ಶ್ರೀ ಡಿ.ಪಿ. ಅನಂತ**, ನಂ. 120, 3ನೇ ಅಡ್ಡರಸ್ತೆ, ಗಂಗಮ್ಮ ಲೇ ಔಟ್, ವಿದ್ಯಾಪೀಠ ವೃತ್ತ, ಟಿ. ಆರ್. ನಗರ ಬೆಂಗಳೂರು
11. **ಡಾ. ರಾಜಗುರು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ**, ಕವಲೇದುರ್ಗ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.
12. **ಡಾ. ರಾಮಶೇಷನ್**, ನಂ.17. 1ನೇ ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಶ್ರೀರಾಂಪುರ 2ನೇ ಹಂತ, ಮೈಸೂರು – 570023
13. **ಡಾ. ಎಸ್. ವೇಣುಗೋಪಾಲ್**, ನಂ. 629, 19ನೇ ಅಡ್ಡರಸ್ತೆ, ಇಂಡಸ್ಟ್ರಿಯಲ್ ಸಬರ್ಬ್, 1ನೇ ಹಂತ, ಮೈಸೂರು – 570008
14. **ಡಾ. ಸಿ. ನಂಜುಂಡಯ್ಯ**, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571811
15. **ಡಾ. ಎಚ್. ಸತ್ಯನಾರಾಯಣ ರಾವ್**, ಪ್ರಾಚಾರ್ಯರು, ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-560028.
16. **ವಿದ್ವಾನ್ ಜೆ.ಸಿ. ರಾಜಶೇಖರಯ್ಯ**, ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ – 572104
17. **ಡಾ. ಎಚ್.ಕೆ. ಸುರೇಶ್ ಆಚಾರ್ಯ**, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ-576101.
18. **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ**, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ – 581334. ಉ.ಕ. ಜಿಲ್ಲೆ
19. **ಡೀನ್**, ಶಾಸ್ತ್ರ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
20. **ಡೀನ್**, ಭಾಷಾ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
21. **ಡೀನ್**, ವೇದಾಂತ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.

**ಪ್ರತಿಗಳು:**

1. **ಮಾನ್ಯ ಕುಲಪತಿಯವರ ಆಪ್ತಶಾಖೆ**, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
2. ಕಛೇರಿ ಪ್ರತಿ
3. ರಕ್ಷತಾ ಪ್ರತಿ


ದೂರವಾಣಿ: 080 – 26701303 / 26705387; ಇ-ಮೇಲ್: karnatakasanskrituniversity@gmail.com
दूरवाणी: ०८०-२६७०१३०३; २६७०५३८७; ई-सङ्केतः – karnatakasanskrituniversity@gmail.com

## ೩೦.೦೬.೨೦೧೫ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೧೫ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ ೧೫ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಜೂನ್ ೩೦, ೨೦೧೫ರ ಮಂಗಳವಾರ ಬೆಳಿಗ್ಗೆ ೧೦.೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಚಿತ್ರದುರ್ಗ | ಸದಸ್ಯರು |
| ೩. ಶ್ರೀ ಬಿ.ಎನ್. ಹೊಸೂರ, ಸವದತ್ತಿ | ಸದಸ್ಯರು |
| ೪. ಡಾ. ಎಂ.ಎ. ಶೃತಿಕೀರ್ತಿ, ಮತ್ತೂರು | ಸದಸ್ಯರು |
| ೫. ಡಾ. ರಾಜಗುರು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕವಲೇದುರ್ಗ | ಸದಸ್ಯರು |
| ೬. ಡಾ. ರಾಮಶೇಷನ್, ಮೈಸೂರು | ಸದಸ್ಯರು |
| ೭. ಡಾ. ಎಸ್. ವೇಣುಗೋಪಾಲ್, ಮೈಸೂರು | ಸದಸ್ಯರು |
| ೮. ಡಾ. ಸಿ. ನಂಜುಂಡಯ್ಯ, ಪ್ರಾಚಾರ್ಯರು, ಆದಿಚುಂಚನಗಿರಿ | ಸದಸ್ಯರು |
| ೯. ಡಾ. ಎಚ್. ಸತ್ಯನಾರಾಯಣ ರಾವ್, ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |
| ೧೦. ವಿದ್ವಾನ್ ಜಿ.ಸಿ. ರಾಜಶೇಖರಯ್ಯ, ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೧೧. ಡಾ. ಎಚ್.ಕೆ. ಸುರೇಶ್ ಆಚಾರ್ಯ, ಪ್ರಾಚಾರ್ಯರು, ಉಡುಪಿ | ಸದಸ್ಯರು |
| ೧೨. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |
| ೧೩. ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಶಾಸ್ತ್ರನಿಕಾಯ & ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. ಶ್ರೀ ಯೋಗೇಶ ಬಾಬು, ಬಿ.ಜಿ. ಕೆರೆ | ಸದಸ್ಯರು |
| ೭. ಶ್ರೀ ಡಿ.ಪಿ. ಅನಂತ, ಬೆಂಗಳೂರು | ಸದಸ್ಯರು |
| ೮. ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ, ಪ್ರಾಚಾರ್ಯರು, ಹೊನ್ನಾವರ | ಸದಸ್ಯರು |
| ೯. ಡಾ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ಕ್ರ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಿಕ್ಷಣ ಪರಿಷತ್‌ನ 14ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.** ಪ್ರಶಿಕ್ಷಣ ಪರಿಷತ್‌ನ 14ನೇ ಸಭೆ ದಿನಾಂಕ: 09.03.2015ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಮಂಡಿಸಿದೆ. | ಸಭೆಯು ಅನುಪಾಲನಾ ವರದಿಯ ಎಲ್ಲಾ ಅಂಶಗಳ ಬಗೆಗೆ ಚರ್ಚಿಸಿತು. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಸೂಚನೆಗಳನ್ನು ಸಭೆಯು ಸೂಚಿಸಿತು. |
| | • <u>ವಿಷಯ ಸಂಖ್ಯೆ 10:</u> 'ವಿಶ್ವವಿದ್ಯಾಲಯದಲ್ಲಿ ಶಿಕ್ಷಾ ನಿಕಾಯ ಎಂಬ ಶಿಕ್ಷಣ ವಿಭಾಗವನ್ನು ಆರಂಭಿಸುವುದ'ಕ್ಕೆ ಸಂಬಂಧಿಸಿದಂತೆ, NCERT ನಿಯಮಾವಳಿಗಳನ್ವಯ ಶಿಕ್ಷಾ ನಿಕಾಯ (ಬಿ.ಎಡ್) ವಿಭಾಗವನ್ನು ತೆರೆಯಲು ವಿಶ್ವವಿದ್ಯಾಲಯವು ಸ್ವಂತ ಸ್ಥಳಾವಕಾಶ ಅಥವಾ ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ಪಡೆದ ಸ್ಥಳಾವಕಾಶವನ್ನು ಹೊಂದಿರುವುದು ಅಗತ್ಯ | |

| | | |
|---|---|---|
| | ಎಂಬ ಅಂಶವನ್ನು ಸಭೆಯು ಗಮನಿಸಿತು. ಪ್ರಸ್ತುತ ವಿಶ್ವವಿದ್ಯಾಲಯದ ಮೈಸೂರು ಆವರಣದಲ್ಲಿ ಶಿಕ್ಷಾ ನಿಕಾಯ ವಿಭಾಗವನ್ನು ಪ್ರಾರಂಭಿಸಲು ಕುಲಪತಿಗಳು ಪರಿಶೀಲಿಸಿ ಸೂಕ್ತ ಕ್ರಮವಹಿಸುವುದು ಎಂದು ಸಭೆಯು ಸೂಚಿಸಿತು.<br>• <u>ವಿಷಯ ಸಂಖ್ಯೆ 13:</u> 'ವಿಶ್ವವಿದ್ಯಾಲಯದ ವೇದಾಂತ ನಿಕಾಯದಲ್ಲಿ ಹಸ್ತಪ್ರತಿ ಸಂರಕ್ಷಣಾ ಹಾಗೂ ಸಂಶೋಧನ ಕೇಂದ್ರವನ್ನು ಪ್ರಾರಂಭಿಸುವ ಬಗೆಗೆ' ಸಂಬಂಧಿಸಿದಂತೆ. ಸದಸ್ಯರಾದ ಡಾ. ಎಸ್. ವೇಣುಗೋಪಾಲ್ ಅವರು ಈ ಬಗೆಗೆ ತುರ್ತಾಗಿ ಕ್ರಮವಹಿಸಬೇಕೆಂದು ಸೂಚಿಸಿದರು. ಸ್ಥಳಾವಕಾಶ ಇಲ್ಲದಿರುವುದರಿಂದಾಗಿ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲವೆಂದು ಅಧ್ಯಯನಾಂಗದ ನಿರ್ದೇಶಕರು ತಿಳಿಸಿದರು. ಯಾವುದೇ ಹಸ್ತಪ್ರತಿಯು ಉಪಲಬ್ಧವಾದಲ್ಲಿ ಈಗಿರುವ ಗ್ರಂಥಾಲಯ ಅಥವಾ ಸೂಕ್ತ ಸ್ಥಳದಲ್ಲಿ ಸಂರಕ್ಷಿಸುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.<br>• <u>ವಿಷಯ ಸಂಖ್ಯೆ 19:</u> 'ಯೋಗ-ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ಮಾನ್ಯತೆ ನೀಡುವ ಬಗೆಗೆ' ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ನಿರ್ದೇಶನದಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಹಾಗೂ ಯೋಗ ವಿಶ್ವವಿದ್ಯಾಲಯದ ಕುಲಪತಿಗಳು ಸದಸ್ಯರಾಗಿದ್ದ ಸಮಿತಿಯು ಯೋಗ ಸರ್ಟಿಫಿಕೇಟ್, ಡಿಪ್ಲೋಮಾ, ಬಿ.ಎ. ಹಾಗೂ ಎಂ.ಎ. ಪದವಿಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು, ಈ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯು ನಿರ್ದೇಶಿಸಿತು.<br>• <u>ವಿಷಯ ಸಂಖ್ಯೆ 22:</u> 'ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಚಾಯಿಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಅಳವಡಿಸುವ ಬಗೆಗೆ' ಸಂಬಂಧಿಸಿದಂತೆ, ಸದಸ್ಯರಾದ ಡಾ. ಎಂ.ಎ. ಶ್ರುತಿಕೀರ್ತಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಸಮಯಾವಕಾಶದ ಅಭಾವದಿಂದಾಗಿ ಇನ್ನೂ ಸಭೆ ಸೇರದ ಹಿನ್ನೆಲೆಯಲ್ಲಿ, ಆದಷ್ಟು ಬೇಗ ಸಭೆಯನ್ನು ನಡೆಸಿ ವರದಿಯನ್ನು ಸಭೆಯಲ್ಲಿ ಮಂಡಿಸುವುದಾಗಿ ಡಾ. ಎಂ.ಎ. ಶ್ರುತಿಕೀರ್ತಿ ಅವರು ಸಭೆಗೆ ತಿಳಿಸಿದರು. | |
| ವಿಷಯ 02 | **2014–15ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾದ ಹೊಸ ಪಾಠ್ಯಕ್ರಮದನ್ವಯ ತಯಾರಿಸಲಾದ ಸಂಸ್ಕೃತ, ಆಂಗ್ಲ ಹಾಗೂ ಕನ್ನಡ ಭಾಷಾಪತ್ರಿಕೆಗಳು ಮತ್ತು ಭಾರತೀಯ ಇತಿಹಾಸ ಪಠ್ಯಪುಸ್ತಕಗಳನ್ನು ಮುದ್ರಿಸುವ ಬಗೆಗೆ.**<br>2014–15ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾದ ಹೊಸ ಪಾಠ್ಯಕ್ರಮದನ್ವಯ ಸಂಸ್ಕೃತ, ಆಂಗ್ಲ ಹಾಗೂ ಕನ್ನಡ ಭಾಷಾಪತ್ರಿಕೆಗಳನ್ನು ಮತ್ತು ಭಾರತೀಯ ಇತಿಹಾಸ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ. ಈ ಪುಸ್ತಕಗಳನ್ನು ಮುದ್ರಿಸಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ವಿಶ್ವವಿದ್ಯಾಲಯದ ನಿಯಮಾನುಸಾರ ನೂತನ ಪಠ್ಯಪುಸ್ತಕಗಳನ್ನು ಮುದ್ರಿಸಲು ಸಭೆಯು ಅನುಮೋದನೆ ನೀಡಿತು. |
| ವಿಷಯ 03 | **ವಿಶ್ವವಿದ್ಯಾಲಯದ ಘಟಕ ಹಾಗೂ ಸಂಬದ್ಧ ಕಾಲೇಜುಗಳ ಅನೇಕ ಅರ್ಹ ಅಭ್ಯರ್ಥಿಗಳಿಂದ ಶೋಧನಿರ್ದೇಶಕತ್ವಕ್ಕಾಗಿ ಬಂದಿರುವ ಆವೇದನಪತ್ರಗಳನ್ನು ಅನುಮೋದಿಸುವ ಬಗೆಗೆ.**<br>ಹಿಂದಿನ ವರ್ಷದಂತೆ ಮಾರ್ಗದರ್ಶನ ಅರ್ಹತೆಯನ್ನು ತೀರ್ಮಾನ ಮಾಡಲು ನಿಯೋಜಿಸಲ್ಪಟ್ಟ ನಿಕಾಯಾಧ್ಯಕ್ಷರ ಸಭೆಯಲ್ಲಿ ಈ ಕೆಳಕಂಡ ವಿದ್ವಾಂಸರ ಶೈಕ್ಷಣಿಕ ವಿವರಗಳನ್ನು ಪರಿಶೀಲಿಸಿ ಮಾರ್ಗದರ್ಶಕತ್ವವನ್ನು ಕೊಡಬಹುದೆಂದು ಶಿಫಾರಸ್ಸು ಮಾಡಿದೆ. ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ.<br>1. ಡಾ. ಇ.ಜಿ. ವೆಂಕಟೇಶನ್, ಕೃಷ್ಣಯಜುರ್ವೇದ ಅಧ್ಯಾಪಕರು, ಮೇಲುಕೋಟೆ<br>2. ಡಾ. ಎಚ್. ಸತ್ಯನಾರಾಯಣಾಚಾರ್, ಪ್ರಾಚಾರ್ಯರು, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು.<br>3. ಡಾ. ತಿರುಮಲ ಕುಲಕರ್ಣಿ, ಅಲಂಕಾರಶಾಸ್ತ್ರ ಪ್ರಾಧ್ಯಾಪಕರು, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು. | ಸಭೆಯು ಅನುಮೋದನೆಯನ್ನು ನೀಡಿತು. |
| ವಿಷಯ 04 | **ಇತರೆ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ 2015–16ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ–ರಾಷ್ಟ್ರೀಯ–ಅಂತಾರಾಷ್ಟ್ರೀಯ ವಿಚಾರಸಂಕಿರಣಗಳನ್ನು ಆಯೋಜಿಸುವ ಬಗೆಗೆ.**<br>ವೇದಾಂತ ನಿಕಾಯದಿಂದ 'ಪುನರ್ಜನ್ಮ ಹಾಗೂ ಕರ್ಮಸಿದ್ಧಾಂತ' ವಿಷಯವನ್ನು ಕುರಿತು ಅಂತಾರಾಷ್ಟ್ರೀಯ ವಿಚಾರಗೋಷ್ಠಿಯನ್ನು ಆಯೋಜಿಸಲು ಪ್ರಸ್ತಾವಿಸಲಾಗಿದೆ. ಈ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. | **ಈ ವಿಷಯವು ತುಂಬ ಪ್ರಸ್ತುತವಾಗಿದೆ ಎಂದು ಸಭೆಯು ಅನುಮೋದನೆಯನ್ನು ನೀಡಿತು. ಈ ಕಾರ್ಯಕ್ರಮಕ್ಕೆ ಸುಮಾರು 2.00 ಲಕ್ಷ ರೂಪಾಯಿಗಳ ಅಂದಾಜು ವೆಚ್ಚವಾಗಬಹುದೆಂದು ಡೀನರು ಸಭೆಗೆ ತಿಳಿಸಿದರು.** |
| ವಿಷಯ 05 | **ಸಂಗೀತ, ನಾಟ್ಯ ಹಾಗೂ ನಾಟಕ ವಿಷಯಗಳಲ್ಲಿ ಸಂಸ್ಕೃತ ಪ್ರಯೋಗದ ಬಗೆಗೆ ಡಿಪ್ಲೋಮಾ ತರಗತಿಗಳನ್ನು ಆರಂಭಿಸುವ ಸಲುವಾಗಿ ಪೂರ್ವಭಾವಿ ತಯಾರಿಗಾಗಿ ಸಲಹಾ ಸಮಿತಿ ಹಾಗೂ ಅಧ್ಯಯನ ಮಂಡಳಿಗಳನ್ನು ರಚಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಸಂಗೀತ, ನಾಟ್ಯ ಹಾಗೂ ನಾಟಕ ವಿಷಯಗಳಲ್ಲಿ ಸಂಸ್ಕೃತ ಪ್ರಯೋಗದ ಬಗೆಗೆ ಡಿಪ್ಲೋಮಾ ತರಗತಿಗಳನ್ನು ಆರಂಭಿಸುವ ಸಲುವಾಗಿ ಪೂರ್ವಭಾವಿ ತಯಾರಿಗಾಗಿ ಕೆಳಕಂಡ ಸದಸ್ಯರನ್ನು ಒಳಗೊಂಡ 'ಸಲಹಾ ಸಮಿತಿ'ಯನ್ನು ರಚಿಸಲಾಗಿದೆ.<br>1. ಕುಲಪತಿಗಳು – **ಅಧ್ಯಕ್ಷರು**<br>2. ಡಾ. ಆರ್. ಗಣೇಶ್, ಬೆಂಗಳೂರು | ಸಲಹಾ ಸಮಿತಿಯನ್ನು ರಚಿಸಿರುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು. |

| | | |
|---|---|---|
| | 3. ಡಾ. ವಿದ್ಯಾಭೂಷಣ, ಬೆಂಗಳೂರು<br>4. ಡಾ. ಎಸ್.ಆರ್. ಲೀಲಾ, ಬೆಂಗಳೂರು<br>5. ಡಾ. ಚೂಡಾಮಣಿ ನಂದಗೋಪಾಲ್, ಬೆಂಗಳೂರು<br>6. ನಿರ್ದೇಶಕರು, ಅಧ್ಯಯನಾಂಗ, ಕಸಂವಿ<br>7. ಡಾ. ಮಂಜುನಾಥ ಭಟ್, ಸಹಾಯಕ ಪ್ರಾಧ್ಯಾಪಕರು, ಕಸಂವಿ–ಸಂಚಾಲಕರು | |
| ವಿಷಯ 06 | **ಪಠ್ಯಪುಸ್ತಕಗಳ ಜೊತೆಗೆ ಪರಾಮರ್ಶನ ಗ್ರಂಥಗಳು ಹಾಗೂ ಸಂಬದ್ಧ ಸಾಹಿತ್ಯ (ಶೋಧ ಲೇಖನಗಳು) ಮುಂತಾದವುಗಳನ್ನು ಸಂಕಲನ ಮಾಡಲು ವಿಷಯವಾರು ಅಧ್ಯಾಪಕರನ್ನು ನೇಮಿಸುವ ಬಗೆಗೆ.**<br>ಪಠ್ಯಪುಸ್ತಕಗಳ ಜೊತೆಗೆ ಪರಾಮರ್ಶನ ಗ್ರಂಥಗಳು ಹಾಗೂ ಸಂಬದ್ಧ ಸಾಹಿತ್ಯ (ಶೋಧ ಲೇಖನಗಳು) ಮುಂತಾದವುಗಳನ್ನು ಸಂಕಲನ ಮಾಡಬೇಕಾಗಿದೆ. ಈ ಕಾರ್ಯಕ್ಕಾಗಿ ಅಧ್ಯಯನಾಂಗದ ನಿರ್ದೇಶಕರು ವಿಷಯವಾರು ಅಧ್ಯಾಪಕರನ್ನು ನೇಮಿಸಲು ಅನುಮತಿ ನೀಡಲು ಸಭೆಯ ಮುಂದೆ ಮಂಡಿಸಿದೆ. | **ಅಧ್ಯಯನಾಂಗದ ನಿರ್ದೇಶಕರು ಈ ಬಗೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 07 | **ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ತೆರಕಣಾಂಬಿ, ಗುಂಡ್ಲುಪೇಟೆ ತಾ. ಮತ್ತು ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಹುಲ್ಲಹಳ್ಳಿ, ನಂಜನಗೂಡು ತಾ. –ಈ ಪಾಠಶಾಲೆಗಳ ಮಾನ್ಯತೆಯನ್ನು 2018–19ರವರೆಗೆ ನವೀಕರಣ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಜೆ.ಎಸ್.ಎಸ್. ಮಹಾವಿದ್ಯಾಪೀಠ (ರಿ.), ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು –ಈ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ (1) ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮತ್ತು (2) ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ –ಈ ಪಾಠಶಾಲೆಗಳಿಗೆ ಕಾವ್ಯ I 2012–13, ಕಾವ್ಯ I, II 2013–14; ಪ್ರಥಮಾ: I, II, III ಕಾವ್ಯ: I, II 2014–15 ರಿಂದ 2018–19ರವರೆಗೆ ಮಾನ್ಯತೆಯನ್ನು ನವೀಕರಣ ಮಾಡಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. | **ಪಾಠಶಾಲೆಗಳ ಮಾನ್ಯತೆ 2018–19ರ ವರೆಗೆ ನವೀಕರಣ ಮಾಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.** |
| ವಿಷಯ 08 | **ಸಂಸ್ಕೃತ ಸಂಜೆ ಕಾಲೇಜಿನಲ್ಲಿ ನೂತನವಾಗಿ ಎಂ.ಎ. ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.**<br>ಸಂಸ್ಕೃತ ಸಂಜೆ ಕಾಲೇಜಿನಲ್ಲಿ ಪ್ರಸ್ತುತ ಬಿ.ಎ. ಪ್ರಥಮ, ದ್ವಿತೀಯ ಹಾಗೂ ಅಂತಿಮ ವರ್ಷದ ತರಗತಿಗಳು ನಡೆಯುತ್ತಿವೆ. ಅದರಂತೆ ಎಂ.ಎ. ತರಗತಿಗಳನ್ನು ಪ್ರಾರಂಭಿಸುವಂತೆ ಹಲವರು ವಿಶ್ವವಿದ್ಯಾಲಯಕ್ಕೆ ಮನವಿಯನ್ನು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸಂಸ್ಕೃತ ಪದವಿ ಸಂಜೆ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಆರಂಭಿಸಲು ಹಾಗೂ ಪಾಠ್ಯಕ್ರಮಗಳನ್ನು ಸಿದ್ಧಪಡಿಸಲು ಕೆಳಕಂಡ ವಿದ್ವಾಂಸರ ಸಮಿತಿಯನ್ನು ರಚಿಸಲು ಅನುಮತಿಗಾಗಿ ಸಭೆಯಲ್ಲಿ ಮಂಡಿಸಿದೆ.<br>1. ನಿರ್ದೇಶಕರು, ಅಧ್ಯಯನಾಂಗ, ಕಸಂವಿ –ಅಧ್ಯಕ್ಷರು<br>2. ಪ್ರಾಚಾರ್ಯರು, ಸಂಸ್ಕೃತ ಸ್ನಾತಕೋತ್ತರ ಸಂಜೆ ಕಾಲೇಜು, ಕಸಂವಿ –ಸಂಚಾಲಕರು<br>3. ಡಾ. ಕೆ.ಎಸ್. ಕಣ್ಣನ್, ಪ್ರಾಧ್ಯಾಪಕರು, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು<br>4. ಡಾ. ಯು. ರಾಧಾಕೃಷ್ಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು<br>5. ಡಾ. ಶೋಭಾ, ಮುಖ್ಯಸ್ಥರು, ಸಂಸ್ಕೃತ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ಬೆಂಗಳೂರು<br>6. ಡಾ. ಅನಂತ ನಾಗೇಂದ್ರ ಭಟ್ಟ, ಮೈಸೂರು ವಿಶ್ವವಿದ್ಯಾಲಯ, ಮೈಸೂರು | **ಸಂಸ್ಕೃತ ಪದವಿ ಸಂಜೆ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಆರಂಭಿಸಲು ಹಾಗೂ ನೂತನ ಪಾಠ್ಯಕ್ರಮಗಳ ಸಿದ್ಧತೆಗಾಗಿ ವಿದ್ವಾಂಸರ ಸಮಿತಿಯನ್ನು ರಚಿಸಿರುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 09 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಇ–ಜರ್ನಲ್' ಶೋಧಪತ್ರಿಕೆ ಪ್ರಾರಂಭಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 'ವಾರ್ತಾಪತ್ರಮ್' ತ್ರೈಮಾಸಿಕ ಹಾಗೂ 'ಕರ್ನಾಟಕ ಸಂಸ್ಕೃತಾಧ್ಯಯನಮ್' ಷಾಣ್ಮಾಸಿಕ ಶೋಧಪತ್ರಿಕೆಯನ್ನು ಮುದ್ರಿಸಿ ಪ್ರಸಾರ ಮಾಡುತ್ತಿದೆ. ಈ ಪತ್ರಿಕೆಗಳ ಪ್ರಸಾರವು ಸೀಮಿತವಾಗಿರುವ ಹಿನ್ನೆಲೆಯಲ್ಲಿ, ಶೀಘ್ರವಾಗಿ ಹಾಗೂ ವಿಶ್ವದ ಎಲ್ಲ ಕಡೆಗಳಲ್ಲಿ ಲಭ್ಯವಾಗುವಂತೆ 'ಇ–ಜರ್ನಲ್' ಶೋಧಪತ್ರಿಕೆಯನ್ನು ಆರಂಭಿಸಲು ಹಾಗೂ ಅಧ್ಯಯನಾಂಗದ ನಿರ್ದೇಶಕರನ್ನು ಈ ಶೋಧಪತ್ರಿಕೆಯ ಸಂಪಾದಕರನ್ನಾಗಿ ನೇಮಕ ಮಾಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಸಭೆಯು ವಿವರಗಳನ್ನು ಪರಿಶೀಲಿಸಿತು. ವಿಶ್ವವಿದ್ಯಾಲಯದಲ್ಲಿ 'ಇ–ಜರ್ನಲ್' ಶೋಧಪತ್ರಿಕೆ ಆರಂಭಿಸಲು ಹಾಗೂ ಅಧ್ಯಯನಾಂಗದ ನಿರ್ದೇಶಕರನ್ನು ಶೋಧಪತ್ರಿಕೆಯ ಸಂಪಾದಕರನ್ನಾಗಿ ನೇಮಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 10 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಶೋಧಪರಿಯೋಜನೆಗಳನ್ನು ಆರಂಭಿಸುವ ಬಗೆಗೆ.**<br>ಸಂಶೋಧನಾ ಯೋಜನೆಯಡಿಯಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಅನುಮತಿ ನೀಡುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು | **ಸಭೆಯು ವಿವರಗಳನ್ನು ಪರಿಶೀಲಿಸಿ, ತಾತ್ತ್ವಿಕವಾಗಿ ಅಂಗೀಕರಿಸಿತು. ಈ ಬಗೆಗೆ ಡೀನ್ ಸಮಿತಿಯಲ್ಲಿ ಪರಿಶೀಲಿಸಿ, ಅನುಮತಿ ನೀಡುವ ಅಂತಿಮ** |

| | | |
|---|---|---|
| | ಮನವಿಯನ್ನು ಸಲ್ಲಿಸಿದ್ದಾರೆ. ಇವರ ಮನವಿಯಂತೆ ವಿಶ್ವವಿದ್ಯಾಲಯದಲ್ಲಿ ಶೋಧಪರಿಯೋಜನೆಗಳನ್ನು ಆರಂಭಿಸಿ. ಸಹಾಯಕ ಪ್ರಾಧ್ಯಾಪಕರು ಸಂಶೋಧನೆಯಲ್ಲಿ ತೊಡಗಿಕೊಳ್ಳುವಂತೆ ಅನುಮತಿ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>1. ವಿದುಷಿ ಅನುಪಮಾ ಬಿ. ಹಾಗೂ ಶ್ರೀ ಋಷಿದೇವ್ ಭಾರ್ಗವ ಎನ್. "ವ್ಯಾಕರಣಶಾಸ್ತ್ರ ಕಾ ಇತಿಹಾಸ್" ಗ್ರಂಥದ ಕನ್ನಡಾನುವಾದ.<br>2. ಡಾ. ವಿನಯ್ ಪಿ. "ತತ್ತ್ವಸಂಖ್ಯಾನ ಹಾಗೂ ತತ್ತ್ವವಿವೇಕ ಗ್ರಂಥಗಳ ವಿಮರ್ಶಾತ್ಮಕ ಅಧ್ಯಯನ".<br>3. ಶ್ರೀ ಭಾಸ್ಕರ ಭಟ್ಟ ಜೋಶಿ "ನ್ಯಾಯವೈಶೇಷಿಕ ಗ್ರಂಥಸೂಚಿ".<br>4. ಡಾ. ರೇಖಾದೇವಿ ಎಸ್.ಎಚ್. "ಅಲಂಕಾರಶಾಸ್ತ್ರದ ಇತಿಹಾಸ".<br>5. ಡಾ. ವಿನಾಯಕ ನಾಮಣ್ಣವರ "ಹಸ್ತಪ್ರತಿಶಾಸ್ತ್ರ ಹಾಗೂ ಲಿಪಿಶಾಸ್ತ್ರ". | ಅಧಿಕಾರವನ್ನು ಕುಲಪತಿಗಳಿಗೆ ಸಭೆಯು ನೀಡಿತು. |

ಪ್ರೊ. ಶ್ರೀನಿವಾಸ ವರಖೇಡಿ
ಸದಸ್ಯ ಕಾರ್ಯದರ್ಶಿ

ಪ್ರೊ. ಪದ್ಮಾಶೇಖರ್
ಅಧ್ಯಕ್ಷರು

## ೩೦.೦೬.೨೦೧೫ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೧೫ನೇ ಸಭೆಯ ನಡಾವಳಿ

| ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವವಾದ ಇತರ ವಿಷಯಗಳು: | | ನಿರ್ಣಯ |
|---|---|---|
| ಕ್ರ.ಸಂ. | ವಿಷಯ ಮತ್ತು ಟಿಪ್ಪಣಿ | |
| ವಿಷಯ 01 | 'ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಚಾಯಿಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಅಳವಡಿಸುವ ಬಗೆಗೆ.<br>ಯುಜಿಸಿಯ ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಯಂತೆ ಯಾವುದೇ ನಿಕಾಯದ/ವಿಭಾಗದ ವಿದ್ಯಾರ್ಥಿಯು ತನ್ನ ಇಚ್ಛೆಯಂತೆ ಬೇರಾವುದೇ ನಿಕಾಯದ/ವಿಭಾಗದ ಪತ್ರಿಕೆಯನ್ನು ಓದಲು ಅವಕಾಶ ಮಾಡಿಕೊಡಬೇಕು ಹಾಗೂ ಹೆಚ್ಚಿನ ಕ್ರೆಡಿಟ್‌ಗಳನ್ನು ಪಡೆಯಲು ಹೆಚ್ಚಿನ ಪತ್ರಿಕೆಗಳನ್ನು ಓದಲು ಅವಕಾಶ ಮಾಡಿಕೊಡಬೇಕು.<br>ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಂ.ಎ. ದ್ವಿತೀಯ ವರ್ಷದ ಐದನೇ ಪತ್ರಿಕೆಯನ್ನು ಆಯಾ ಶಾಸ್ತ್ರದ ವಿದ್ಯಾರ್ಥಿಗಳಾಗಲೀ ಬೇರೆ ಶಾಸ್ತ್ರದ ವಿದ್ಯಾರ್ಥಿಗಳಾಗಲೀ ತೆಗೆದುಕೊಳ್ಳಬಹುದು.<br>ಉದಾಹರಣೆಗೆ –ಅಲಂಕಾರಶಾಸ್ತ್ರದ ಐದನೇ ಪತ್ರಿಕೆಯನ್ನು ಅಲಂಕಾರಶಾಸ್ತ್ರದ ವಿದ್ಯಾರ್ಥಿಗಳಾಗಲೀ ಬೇರಾವುದೇ ಶಾಸ್ತ್ರದ ವಿದ್ಯಾರ್ಥಿಗಳಾಗಲೀ ತೆಗೆದುಕೊಳ್ಳಲು ಅವಕಾಶವಿರಬೇಕು.<br>ಅಲಂಕಾರ ಶಾಸ್ತ್ರದ ಐದನೇ ಪತ್ರಿಕೆಯನ್ನು ಆ ಶಾಸ್ತ್ರದ ವಿದ್ಯಾರ್ಥಿಗಳು ತೆಗೆದುಕೊಳ್ಳದೇ ಬೇರೆ ಶಾಸ್ತ್ರದ ಪತ್ರಿಕೆಯನ್ನೇ ತೆಗೆದುಕೊಳ್ಳಬೇಕೆಂದು ನಿರ್ಬಂಧಿಸುವುದು ಸರಿಯಲ್ಲ.<br>ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | ಎಂ.ಎ. ದ್ವಿತೀಯ ವರ್ಷದ ಐದನೇ ಪತ್ರಿಕೆಯನ್ನು ಆಯಾ ಶಾಸ್ತ್ರದ ವಿದ್ಯಾರ್ಥಿಗಳಾದರೂ ಓದಬಹುದು ಅಥವಾ ಬೇರೆ ಶಾಸ್ತ್ರದ ವಿದ್ಯಾರ್ಥಿಗಳೂ ಓದಬಹುದು. ಈ ಪತ್ರಿಕೆಯು ಬೇರೆ ಶಾಸ್ತ್ರದವರಿಗೆ ಐಚ್ಛಿಕವಾಗಿರಬೇಕು ಎಂದು ಸಭೆಯು ನಿರ್ಣಯಿಸಿತು. |

Shrivara (signature)

ಪ್ರೊ. ಶ್ರೀನಿವಾಸ ವರಖೇಡಿ
ಸದಸ್ಯ ಕಾರ್ಯದರ್ಶಿ

ಪದ್ಮಾಶೇಖರ್ (signature)

ಪ್ರೊ. ಪದ್ಮಾಶೇಖರ್
ಅಧ್ಯಕ್ಷರು